**Mandar Vasmatkar**
Company Secretary & Chief-Compliance
mandar.vasmatkar@timken.com

11 August, 2026

The National Stock Exchange of India Limited
Exchange Plaza, Plot No. C/1,
G-Block, Bandra- Kurla Complex,
Bandra (E),
Mumbai- 400 051.

**NSE Symbol - TIMKEN**

BSE Limited
Phiroze Jeejeebhoy Towers,
Dalal Street, Fort,
Mumbai- 400 001.

**Scrip Code- 522113**

Dear Sir/Madam,

**Sub: Newspaper Publication**

We enclose herewith copies of newspaper publications relating to Notice of Petition in the matter of Amalgamation of Timken GGB Technology Private Limited (a wholly owned subsidiary) with the Company.

Copies of the same are available on the website of the Company at https://www.timken.com/en-in/investors/statutory-compliances/.

We request you to kindly take this on record.
Thanking you.

Yours sincerely,
For **Timken India Limited**
MANDAR MOHANIRAJ VASMATKAR
Digitally signed by MANDAR MOHANIRAJ VASMATKAR
Date: 2026.08.11 18:13:05 +05'30'
**Mandar Vasmatkar**
**Company Secretary**
**& Chief – Compliance**

# ಸತ್ತ ಕೋಳಿಗೂ ಪರಿಹಾರ ಕೊಡಿ: ಹೈಕೋರ್ಟ್

## ರಸ್ತೆ ಅಪಘಾತದಲ್ಲಿ ಕೋಳಿಗಳು ಸಾವಿಗೀಡಾದರೆ ಜೀವಸಂಪತ್ತೆಂದು ಪರಿಗಣನೆ | ವಿಮಾ ಕಂಪನಿಗೆ ಪರಿಹಾರ ಹೊಣೆ

**ಬೆಂಗಳೂರು:** ಸರಕು ಸಾಗಣೆ ವಾಹನದಲ್ಲಿ ಸಾಗಿಸುತ್ತಿದ್ದ ಬ್ರಾಯ್ಲರ್ ಕೋಳಿಗಳು ಅಪಘಾತದಲ್ಲಿ ಸಾವಿಗೀಡಾದರೆ, ಅವುಗಳನ್ನು 'ಜೀವಸಂಪತ್ತು' ಹಾಗೂ 'ಸರಕು' ಎಂದು ಪರಿಗಣಿಸಬೇಕು ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅಪಘಾತದ ವೇಳೆ ವಾಹನದಲ್ಲಿದ್ದ ಕೋಳಿಗಳಿಗೆ ನೀಡಿದ್ದ ಪರಿಹಾರ ಮೊತ್ತ ಹೆಚ್ಚಳ ಮಾಡಬೇಕು ಎಂದು ಮಾಲೀಕ ಕೆ.ವೀರನಾರಾಯಣ ಸ್ವಾಮಿ ಮತ್ತು ಕೋಳಿಗಳಿಗೆ ಪರಿಹಾರ ನೀಡಲು ಸೂಚನೆ ನೀಡಿದ್ದ ಮೋಟಾರು ವಾಹನ ಅಪಘಾತಗಳ ಪರಿಹಾರ ನ್ಯಾಯಾಧಿಕರಣದ ಆದೇಶ ಪ್ರಶ್ನಿಸಿ ರಿಲಯನ್ಸ್ ಜನರಲ್ ಇನ್ಶೂರೆನ್ಸ್ ಕಂಪನಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದವು. ಈ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಬಿ.ಗೀತಾ ಅವರಿದ್ದ ಧಾರವಾಡ ಪೀಠ ಈ ಆದೇಶ ನೀಡಿದೆ. ಅಲ್ಲದೇ, ಮೃತ ಕೋಳಿಗಳಿಗೂ ವಿಮಾ ಕಂಪನಿಯು ಪರಿಹಾರ ನೀಡುವ ಬಾಧ್ಯಸ್ಥನಾಗಿರಲಿದೆ ಎಂದು ಪೀಠ ಹೇಳಿದೆ.



ಕರ್ನಾಟಕ ಮೋಟಾರು ವಾಹನ ನಿಯಮಗಳಲ್ಲಿ ಕೋಳಿಯನ್ನು ಉಲ್ಲೇಖಿಸಿಲ್ಲ. ಆದರೆ, ಮೋಟಾರು ವಾಹನ ಕಾಯಿದೆ 1988ರ ಸೆಕ್ಷನ್ 2(13) ರ ಪ್ರಕಾರ 'ಸರಕು' ಎಂಬ ಪದವು ಜೀವಸಂಪತ್ತನ್ನು ಒಳಗೊಂಡಿರುತ್ತದೆ. ಕೋಳಿಗಳೂ ಸಹ ಜೀವವಿರುವ ಪ್ರಾಣಿ/ಪಕ್ಷಿಗಳಾಗಿರುವುದರಿಂದ ಅವುಗಳನ್ನು ಜೀವಸಂಪತ್ತು ಹಾಗೂ ಸರಕು ಎಂದು ಪರಿಗಣಿಸಬೇಕು ಎಂದು ಪೀಠ ತಿಳಿಸಿದೆ.

ಅಲ್ಲದೆ, ಬಳ್ಳಾರಿಯ ಮೋಟಾರು ವಾಹನ ಅಪಘಾತಗಳ ಪರಿಹಾರ ನ್ಯಾಯಾಧಿಕರಣ ನೀಡಿದ್ದ 4,51,000 ರೂಪಾಯಿಗಳ ಪರಿಹಾರ ಮೊತ್ತ ಹೈಕೋರ್ಟ್ ಎತ್ತಿಹಿಡಿದಿದೆ. ಆದರೆ, ನ್ಯಾಯಾಧಿಕರಣ ವಿಧಿಸಿದ್ದ ಶೇ.7ರಷ್ಟು ಬಡ್ಡಿದರ ಶೇ.6ಕ್ಕೆ ಇಳಿಸಿ ಆದೇಶಿಸಿದೆ. ಇದೇ ವೇಳೆ, ಹೆಚ್ಚುವರಿ ಪರಿಹಾರ ಕೋರಿ ಕೆ.ವೀರ ನಾರಾಯಣಸ್ವಾಮಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿ ಆದೇಶಿಸಿದೆ.

### ಪ್ರಕರಣದ ಹಿನ್ನೆಲೆ

ಬಳ್ಳಾರಿಯ ಅಂಧ್ರಹಾಳ ಗ್ರಾಮದ 'ಬಾಲಾಜಿ ಪೌಲ್ಟ್ರಿ ಫಾರ್ಮ್' ಮಾಲೀಕರಾದ ಕೆ.ವೀರ ನಾರಾಯಣಸ್ವಾಮಿ ಅವರು 2013ರ ಜೂನ್



18ರಂದು ಚಳ್ಳಕೆರೆ ಪೌಲ್ಟ್ರಿ ಫಾರ್ಮ್‌ನಿಂದ 2,250 ಬ್ರಾಯ್ಲರ್ ಕೋಳಿಗಳನ್ನು ಖರೀದಿಸಿ ಐಚರ್ ವಾಹನದಲ್ಲಿ ಸಾಗಿಸುತ್ತಿದ್ದರು. ಜೂನ್ 19ರಂದು ಮುಂಜಾನೆ 4 ಗಂಟೆ ಸುಮಾರಿಗೆ ಅಯ್ಯಗರಲಪಳ್ಳಿ - ಸೆಟ್ಟೂರು ರಸ್ತೆಯಲ್ಲಿ ವಾಹನ ಅಪಘಾತಕ್ಕೀಡಾಗಿ ಪಲ್ಟಿಯಾಯಿತು. ಪರಿಣಾಮ, ಸುಮಾರು 2,000 ಕೋಳಿಗಳು ಸ್ಥಳದಲ್ಲೇ ಸಾವಿಗೀಡಾದವು ಮತ್ತು 250 ಕೋಳಿಗಳನ್ನು ಸ್ಥಳೀಯರು ತೆಗೆದುಕೊಂಡು ಹೋಗಿದ್ದರು. ಅಪಘಾತದಲ್ಲಿ ಆದ ನಷ್ಟಕ್ಕಾಗಿ 5,90,000 ರು. ಪರಿಹಾರ ನೀಡಬೇಕು ಎಂದು ಕೋರಿ ವೀರ ನಾರಾಯಣಸ್ವಾಮಿ ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಧಿಕರಣ ಕೋಳಿಗಳಿಗೂ ಪರಿಹಾರ ನೀಡಲು ಸೂಚನೆ ನೀಡಿತ್ತು. ಇದನ್ನು ಪ್ರಶ್ನಿಸಿ ವಿಮಾ ಕಂಪನಿ ಮತ್ತು ಹೆಚ್ಚುವರಿ ಪರಿಹಾರ ಕೋರಿ ವೀರನಾರಾಯಣ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

# ಪೋಲಾರ್ ಬೇರ್ 100ನೇ ಶಾಖೆ

**ಬೆಂಗಳೂರು:** ಪೋಲಾರ್ ಬೇರ್ ಕಂಪನಿ ಬೆಂಗಳೂರಿನಲ್ಲಿ ತನ್ನ 100ನೇ ಮಳಿಗೆ ಉದ್ಘಾಟಿಸಿದೆ. ರಾಷ್ಟ್ರಮಟ್ಟದಲ್ಲಿ ತನ್ನ 200ನೇ ಮಳಿಗೆಯನ್ನು ಪ್ರಾರಂಭಿಸುವ ಮೂಲಕ ಹೊಸ ದಾಖಲೆ ಬರೆದಿದೆ. ಸಂಪೂರ್ಣ ಭಾರತೀಯ ಮಾಲೀಕತ್ವದ ಹಾಗೂ ಸ್ವಯಂ-ಬಂಡವಾಳ ಹೂಡಿಕೆಯೊಂದಿಗೆ ಬೆಳೆದಿರುವ ಪೋಲಾರ್ ಬೇರ್, 2008ರಲ್ಲಿ ಬೆಂಗಳೂರಿನ ಐಟಿಪಿಎಲ್ ಬಳಿ ಕೇವಲ ಒಂದು ಸಣ್ಣ ಮಳಿಗೆಯಿಂದ ಪ್ರಾರಂಭವಾಗಿತ್ತು. ಇಂದು ದೇಶದ 35ಕ್ಕೂ ಹೆಚ್ಚು ನಗರಗಳಲ್ಲಿ 200ಕ್ಕೂ ಅಧಿಕ ಡೈನ್-ಇನ್ ಸಂಡೇ ಪಾರ್ಲರ್ ಗಳನ್ನು ಹೊಂದುವ ಮೂಲಕ ಭಾರತದ ಅತಿದೊಡ್ಡ ದೇಶೀಯ ಡೆಸರ್ಟ್ ಬ್ರ್ಯಾಂಡ್ ಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಉದ್ಯಮಿ ಕಿಶೋರ್ ರೈ ಅವರಿಂದ ಸ್ಥಾಪಿತವಾದ ಈ ಸಂಸ್ಥೆ, ಗುಣಮಟ್ಟ, ಹೊಸತನ ಮತ್ತು ಮರೆಯಲಾಗದ ಗ್ರಾಹಕ ಅನುಭವಕ್ಕೆ ಆದ್ಯತೆ ನೀಡುತ್ತಾ ಸ್ಥಿರವಾಗಿ ಬೆಳೆದಿದೆ ಎಂದು ಪ್ರಕಟಣೆ ತಿಳಿಸಿದೆ.

AMBIT Finvest
Pragati ke partner
AMBIT

**ಅಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್**
CIN: U65999MH2006PTC163257
ನೋಂ. ಕಚೇರಿ : ಅಂಬಿಟ್ ಹೌಸ್, 449, ಸೇನಾಪತಿ ಬಾಪಟ್ ಮಾರ್ಗ್
ಲೋವರ್ ಪರೇಲ್, ಮುಂಬಯಿ – 400013

**ಸಾರ್ವಜನಿಕ ಸೂಚನೆ**

ಈ ಮೂಲಕ ತಿಳಿಸುವುದೇನೆಂದರೆ, ಈ ಕೆಳಗಿನ ಶಾಖಾ ಕಚೇರಿ
ನಂಜಪ್ಪ ಕಾಂಪ್ಲೆಕ್ಸ್, 1ನೇ ಮಹಡಿ, ಸರ್ವೆ ನಂ. 139/2, ಖಾತಾ ನಂ. 139/2/28, ಆಸ್ತಿ ನಂ. 28, ಲಗ್ಗೆರೆ, ಯಶವಂತಪುರ ಹೋಬಳಿ ಬೆಂಗಳೂರು ಉತ್ತರ, ಬೆಂಗಳೂರು-560058
12ನೇ ನವೆಂಬರ್ 2026 ರಿಂದ ಸ್ಥಗಿತಗೊಳ್ಳಲಿದೆ.
ಮುಂದಿನ ಎಲ್ಲಾ ಸಂವಹನಗಳಿಗಾಗಿ ಕಂಪನಿಯ ಕಾರ್ಪೊರೇಟ್ ವ್ಯವಹಾರಗಳಿಗಾಗಿ ನಮ್ಮನ್ನು ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು

ಅಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್
ಶಾಪ್ ನಂ. 1,2 & 3, 2ನೇ ಮಹಡಿ. 52/1, ಶಿಬ್ರ ಫಾರ್ಮ್
ನಾಗಸಂದ್ರ ಅಂಚೆ, ಬೆಂಗಳೂರು – 560073
ಇ-ಮೇಲ್ ಐಡಿ : customercare@ambit.co • ಸಂಪರ್ಕ ಸಂ. +91 91159 98000

ಸ್ಥಳ: ಕರ್ನಾಟಕ
ದಿನಾಂಕ: 11.08.2026
ಸಹಿ/-
ಅಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್ ಪರವಾಗಿ



ಜಮ್ಮು-ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಸೈಕ್ಲಿಂಗ್ ಸಾಧನೆ ಮಾಡಿದ ಉದ್ಯಮಿ ಸತ್ವೀರ್ ರೊಟ್ಟಿ ಹಾಗೂ ಮಕ್ಕಳಾದ ವಿನಯ್ ರೊಟ್ಟಿ ಮತ್ತು ಸುಮಂತ್ ರೊಟ್ಟಿ ಅವರನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಅನುಚೇತ್ ಸನ್ಮಾನಿಸಿ ಅಭಿನಂದಿಸಿದರು. ಈ ವೇಳೆ ಕ್ರೀಡಾ ಇಲಾಖೆಯ ಜಂಟಿ ನಿರ್ದೇಶಕ ಜಿತೇಂದ್ರ ಶೆಟ್ಟಿ ಹಾಗೂ ವಾರ್ತಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಡಾ. ಗಿರೀಶ್ ಎಲ್.ಪಿ ಉಪಸ್ಥಿತರಿದ್ದರು.

# ಇಬ್ಬರು ಹೆಣ್ಣು ಮಕ್ಕಳ ಕೊಂದು ಆತ್ಮಹತ್ಯೆಗೆ ಯತ್ನಿಸಿದ ತಂದೆ

## ಏರ್‌ಪೋರ್ಟ್ ಬಳಿಯ ತಾಜ್ ಹೋಟೆಲ್‌ನಲ್ಲಿ ಕೃತ್ಯ

**ಬೆಂಗಳೂರು:** ಕೆಂಪೇಗೌಡ ವಿಮಾನ ನಿಲ್ದಾಣ ಬಳಿ ಇರುವ ತಾಜ್ ಹೋಟೆಲ್‌ನಲ್ಲಿ ಬೆಂಗಳೂರು ನಗರವನ್ನೇ ಬೆಚ್ಚಿಬೀಳಿಸುವಂತಹ ಘೋರ ಕೃತ್ಯ ನಡೆದಿದೆ. ವ್ಯಕ್ತಿಯೊಬ್ಬ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ನೇಣುಹಾಕಿ ಕೊಂದು ತಾನೂ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ನಡೆದಿದೆ.

ತಾಜ್ ಹೋಟೆಲ್‌ನ 4ನೇ ಮಹಡಿಯ ಕೊಠಡಿಯಲ್ಲಿ ಘಟನೆ ನಡೆದಿದ್ದು, ಇಮ್ರಾನ್ ಎಂಬಾತ ತನ್ನ 5 ಹಾಗೂ 10 ವರ್ಷದ ಇಬ್ಬರು ಹೆಣ್ಣುಮಕ್ಕಳನ್ನ ಹತ್ಯೆ ಮಾಡಿ, ಬಳಿಕ ಆತ್ಮಹತ್ಯೆಗೆ ಯತ್ನಿಸಿದ್ದಾನೆ.

ಕೊಲೆಯಾದ ಮಕ್ಕಳನ್ನ ಶೇಕ್ ಜೆಹರಾ (5 ವರ್ಷ), ಶೇಕ್ ಜೋಯಾ (10 ವರ್ಷ) ಎಂದು ಗುರುತಿಸಲಾಗಿದೆ. ಮಕ್ಕಳನ್ನ ಹತ್ಯೆ ಮಾಡಲು ಹೋಟೆಲ್‌ನಲ್ಲಿ ಮುಂಚೆ ತವಾಗಿಯೇ ರೂಂ ಬುಕ್ ಮಾಡಿದ್ದ. ಕೃತ್ಯದ ಬಳಿಕ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಯತ್ನಿಸಿದ್ದು, ಅದರಲ್ಲಿ ಪತ್ನಿಯ ಅಕ್ರಮ ಸಂಬಂಧದ ಬಗ್ಗೆ ಉಲ್ಲೇಖಿಸಿರುವ ಬಗ್ಗೆ ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ. ಇಮ್ರಾನ್ ಮೂಲತಃ ಬೆಂಗಳೂರಿನ ನಾಗವಾರದ ನಿವಾಸಿಯಾಗಿದ್ದು, ಜಿಮ್ಮಿ ಕ್ಯಾಬ್ ಸಂಸ್ಥೆಯಲ್ಲಿ ಮ್ಯಾನೇಜರ್ ಆಗಿದ್ದ. ಕತ್ತು ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ ಇಮ್ರಾನ್‌ನನ್ನು ಸದ್ಯ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ಘಟನೆ ತಿಳಿಯುತ್ತಿದ್ದಂತೆ ವಿಮಾನ ನಿಲ್ದಾಣದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

**[illegible]ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ - ಬೆಂಗಳೂರು ಪೀಠ**

**ಫಾರ್ಮ್ ನಂ. NCLT. 3A**
**ಅರ್ಜಿಯ ವಿವರಗಳನ್ನು ಒಳಗೊಂಡ ಪ್ರಕಟಣೆ**
[ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ ನಿಯಮಗಳು, 2016ರ ನಿಯಮ 35ನ್ನು ನೋಡಿ]
**ಸಮ್ಮಿಳಿತ ಯೋಜನೆ**
ಇವರ ನಡುವೆ
**ಟಿಮ್ಕೆನ್ ಜಿಜಿಬಿ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್**
(ಅರ್ಜಿದಾರ ಕಂಪನಿ ನಂ.1 / ವರ್ಗಾವಣೆಗೊಳ್ಳುವ ಕಂಪನಿ)
ಮತ್ತು
**ಟಿಮ್ಕೆನ್ ಇಂಡಿಯಾ ಲಿಮಿಟೆಡ್**
(ಅರ್ಜಿದಾರ ಕಂಪನಿ ನಂ.2 / ವರ್ಗಾವಣೆ ಸ್ವೀಕರಿಸುವ ಕಂಪನಿ)
ಮತ್ತು ಅವುಗಳ ಸಂಬಂಧಿತ ಷೇರುದಾರರು ಮತ್ತು ಸಾಲಗಾರರು
**ಕಂಪನಿ ಅರ್ಜಿ (CAA) ನಂ. 21/BB/2026**
ಇದರೊಂದಿಗೆ ಜೋಡಿಸಲಾಗಿದೆ
ಕಂಪನಿ ಅರ್ಜಿ (CAA) ನಂ. 11/BB/2026

**ಟಿಮ್ಕೆನ್ ಜಿಜಿಬಿ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್**
(CIN: U29130KA2007PTC203242)
ಕಂಪನಿಗಳ ಕಾಯ್ದೆ, 1956ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಕಂಪನಿ,
ನೋಂದಾಯಿತ ಕಚೇರಿ: 235 ಬಿನ್ನಮಂಗಲ, 2ನೇ ಮಹಡಿ, 13ನೇ ಕ್ರಾಸ್ ರಸ್ತೆ, 2ನೇ ಹಂತ, ಇಂದಿರಾನಗರ, ಬೆಂಗಳೂರು, ಕರ್ನಾಟಕ, ಭಾರತ, 560038.
ಪ್ರತಿನಿಧಿಸುವವರು: ಶ್ರೀ ಸುಜಿತ್ ಕುಮಾರ್ ಪಟ್ನಾಯಕ್, ನಿರ್ದೇಶಕ / ಅಧಿಕೃತ ಸಹಿದಾರರು
... ಅರ್ಜಿದಾರ ಕಂಪನಿ ನಂ.1 / ವರ್ಗಾವಣೆಗೊಳ್ಳುವ ಕಂಪನಿ
**ಟಿಮ್ಕೆನ್ ಇಂಡಿಯಾ ಲಿಮಿಟೆಡ್**
(CIN: L29130KA1996PLC048230)
ಕಂಪನಿಗಳ ಕಾಯ್ದೆ, 1956ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಕಂಪನಿ,
ನೋಂದಾಯಿತ ಕಚೇರಿ: 39-42, ಎಲೆಕ್ಟ್ರಾನಿಕ್ ಸಿಟಿ, ಹಂತ II, ಹೊಸೂರು ರಸ್ತೆ, ಬೆಂಗಳೂರು, ಕರ್ನಾಟಕ, ಭಾರತ, 560100.
ಪ್ರತಿನಿಧಿಸುವವರು: ಶ್ರೀ ಮಂದಾರ್ ವಸ್ಮತ್ಕರ್, ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ ಅನುಸರಣೆ ಅಧಿಕಾರಿ / ಅಧಿಕೃತ ಸಹಿದಾರರು
... ಅರ್ಜಿದಾರ ಕಂಪನಿ ನಂ.2 / ವರ್ಗಾವಣೆ ಸ್ವೀಕರಿಸುವ ಕಂಪನಿ
(ಇನ್ನು ಮುಂದೆ ಒಟ್ಟಾಗಿ 'ಅರ್ಜಿದಾರ ಕಂಪನಿಗಳು' ಎಂದು ಕರೆಯಲ್ಪಡುತ್ತವೆ)

**ಅರ್ಜಿಯ ಪ್ರಕಟಣೆ (NOTICE OF PETITION)**
ಟಿಮ್ಕೆನ್ ಜಿಜಿಬಿ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ (ಅರ್ಜಿದಾರ ಕಂಪನಿ ನಂ.1 / ವರ್ಗಾವಣೆಗೊಳ್ಳುವ ಕಂಪನಿ) ಮತ್ತು ಟಿಮ್ಕೆನ್ ಇಂಡಿಯಾ ಲಿಮಿಟೆಡ್ (ಅರ್ಜಿದಾರ ಕಂಪನಿ ನಂ.2 / ವರ್ಗಾವಣೆ ಸ್ವೀಕರಿಸುವ ಕಂಪನಿ) ಹಾಗೂ ಅವುಗಳ ಸಂಬಂಧಿತ ಷೇರುದಾರರು ಮತ್ತು ಸಾಲಗಾರರ ನಡುವಿನ ಸಮ್ಮಿಳಿತ ಯೋಜನೆಗೆ ಅನುಮೋದನೆ ಕೋರಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230 ರಿಂದ 232ರ ಅಡಿಯಲ್ಲಿ ಸಲ್ಲಿಸಲಾದ ಜಂಟಿ ಕಂಪನಿ ಅರ್ಜಿಯು 2026ರ ಜುಲೈ 31ರ ಶುಕ್ರವಾರದಂದು ಮಂಡಿಸಲ್ಪಟ್ಟಿದೆ ಮತ್ತು ಸದರಿ ಅರ್ಜಿಯು ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ, ಬೆಂಗಳೂರು ಪೀಠದ ಮುಂದೆ 2026ರ ಸೆಪ್ಟೆಂಬರ್ 25ರಂದು ವಿಚಾರಣೆಗೆ ನಿಗದಿಯಾಗಿದೆ.
ಸದರಿ ಅರ್ಜಿಯನ್ನು ಬೆಂಬಲಿಸಲು ಅಥವಾ ವಿರೋಧಿಸಲು ಬಯಸುವ ಯಾವುದೇ ವ್ಯಕ್ತಿಯು, ತನ್ನ ಅಥವಾ ತನ್ನ ವಕೀಲರ/ಪ್ರತಿನಿಧಿಯ ಸಹಿಯೊಂದಿಗೆ, ತನ್ನ ಹೆಸರು ಮತ್ತು ವಿಳಾಸದೊಂದಿಗೆ, ತನ್ನ ಆಸಕ್ತಿಯ ಸ್ವರೂಪವನ್ನು ಸೂಚಿಸುವ ನೋಟೀಸನ್ನು, (i) ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ, ಬೆಂಗಳೂರು ಪೀಠದ ರಿಜಿಸ್ಟ್ರಿ ಮತ್ತು (ii) ಸಂಬಂಧಿತ ಅರ್ಜಿದಾರ ಕಂಪನಿಗಳ ನೋಂದಾಯಿತ ಕಚೇರಿ/ಅಧಿಕೃತ ಪ್ರತಿನಿಧಿಗೆ (ಮೇಲೆ ತಿಳಿಸಲಾದ ವಿಳಾಸಕ್ಕೆ), ಅರ್ಜಿಯ ವಿಚಾರಣೆಯ ದಿನಾಂಕಕ್ಕಿಂತ ಎರಡು (2) ದಿನಗಳ ಮುಂಚಿತವಾಗಿ ತಲುಪುವಂತೆ ಕಳುಹಿಸಬೇಕು. ಅರ್ಜಿಯನ್ನು ವಿರೋಧಿಸಲು ಬಯಸುವಲ್ಲಿ, ವಿರೋಧದ ಆಧಾರಗಳು ಅಥವಾ ಅವರ ಪ್ರಮಾಣಪತ್ರದ ಪ್ರತಿಯನ್ನು ಅಂತಹ ನೋಟೀಸಿನೊಂದಿಗೆ ಒದಗಿಸಬೇಕು.
ಅರ್ಜಿಯ ಪ್ರತಿಯನ್ನು ಕೋರುವ ಯಾವುದೇ ವ್ಯಕ್ತಿಗೆ ಅಂತಹ ಪ್ರತಿಯು ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿದ ಮೇರೆಗೆ ಸಹಿದಾರರಿಂದ ಒದಗಿಸಲ್ಪಡುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ: 11 ಆಗಸ್ಟ್ 2026
ಟಿಮ್ಕೆನ್ ಜಿಜಿಬಿ ಟೆಕ್ನಾಲಜಿ ಪ್ರಾ. ಲಿ. ಪರವಾಗಿ
ಸಹಿ/-
ಸುಜಿತ್ ಕುಮಾರ್ ಪಟ್ನಾಯಕ್
ಅಧಿಕೃತ ಸಹಿದಾರರು
ಟಿಮ್ಕೆನ್ ಇಂಡಿಯಾ ಲಿಮಿಟೆಡ್ ಪರವಾಗಿ
ಸಹಿ/-
ಮಂದಾರ್ ವಸ್ಮತ್ಕರ್
ಅಧಿಕೃತ ಸಹಿದಾರರು

**PUBLIC NOTICE**
**IN THE COURT OF THE HON'BLE SENIOR CIVIL JUDGE AT MALAVALLI**
**O.S. NO. 17/2022**

**Plaintiffs:** Smt. Mangalagowri, W/o Manjunatha, D/o late Javarayigowda @ Kullegowda, Aged about 48 years, R/at Kyathanahalli Village, B.G.Pura Hobli, Malavalli Taluk and Mandya District. & also residing at #209, 2nd main road, New Binny Mill layout, Magadi road, Bengaluru north, Bengaluru.
V/s
**Defendants:** Sri. N. Nagaraju & others
TO:
**7. Sri. Somashekhar.N** S/o N.Nagaraju, aged about 40 years (...Proposed Defendant No. 7)
**8. Sri. Chandrashekhar N** S/o N.Nagaraju, aged about 38 years (...Proposed Defendant No. 8)
**9. Smt. N.Sumalatha** D/o N.Nagaraju, W/o Vinaya kumar hedge.S aged about 36 years (...Proposed Defendant No. 9)
**10. Smt. Usharani.N** D/o N.Nagaraju, aged about 33 years (...Proposed Defendant No. 10)
All are R/at No.3, 1st main, 5th cross, Near Prashanth Ganapathi temple, Prashantha nagara, Bangalore-North-560079.

Whereas, the Plaintiff has filed the above Suit against the defendants in respect of the suit schedule properties, for relief of partition and separate Possession of her share in respect of the suit schedule property to the extent of their share, further ordering enquiry into mesne profits.

That, the notice sent to you by this Hon'ble Court returned un-served with a shara "addressee not found". Now, the above case is posted to **11-09-2026**.

Therefore, you are here by summoned to appear before this Hon'ble court in person or through your advocate on **11-09-2026 at 11.A.M**, failing which you will be placed exparte and proceed in the above case in accordance with law.

Given under my hand and seal on this 4th day of August 2026.

**Advocate:**
**S.T. SOMASHEKHARA**
**Room No.5, 1st floor, Shreenanjundeshwara [illegible]mplex, [illegible]G. Road, Fort [illegible]mohalla, Mysuru-4.**

**By order of the Court**
**SHERISTEDAR**
**Senior Civil Judge & JMFC, At Malavalli**

# ಮಾಲೀಕರ ಮನೆಗೆ ಕನ್ನ

## ಮನೆ ಮೇಲೆ ನಿಗಾ ಇಡಲು ಹೇಳಿ ಪ್ರವಾಸ
## ಹಣ, ಒಡವೆ ಕದ್ದು ನೇಪಾಳಿ ಕುಟುಂಬ ಪರಾರಿ

**ಬೆಂಗಳೂರು:** 2 ತಿಂಗಳಿಂದ ಮನೆ ಮಂದಿಯಂತ್ತಿದ್ದ ಕೆಲಸದವರೇ ಮಾಲೀಕ ಊರಿಗೆ ಹೋಗುತ್ತಿದ್ದಂತೆ ಮನೆಯನ್ನೆ ಗುಡಿಸಿ ಗುಂಡಾಂತರ ಮಾಡಿ ಪರಾರಿಯಾಗಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ಹೊರವಲಯದಲ್ಲಿ ನಡೆದಿದೆ.

ಮನೆಯಲ್ಲಿ ಯಾರೂ ಇಲ್ಲ ಎಂಬ ಮಾಹಿತಿ ಗೊತ್ತಿದ್ದ ಹಿನ್ನೆಲೆ ಮಧ್ಯರಾತ್ರಿ ಮನೆಗೆ ನುಗ್ಗಿದ ಆರೋಪಿಗಳು ಚಿನ್ನಾಭರಣ, ಬೆಳ್ಳಿ ಹಾಗೂ ನಗದನ್ನು ದೋಚಿ ಎಸ್ಕೇಪ್ ಆಗಿದ್ದಾರೆ. ಘಟನೆಯ ಸಂಪೂರ್ಣ ದೃಶ್ಯಾವಳಿ ಮನೆಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಹೊಸಕೋಟೆ ಹೊರವಲಯದ ಹೆದ್ದಾರಿ ಬದಿಯ 40 ಎಕರೆ ಪ್ರದೇಶದಲ್ಲಿರುವ ಪಾಲಮ್ ವಿಲ್ಲಾ ಬಡಾವಣೆಯಲ್ಲಿ ಕುಟುಂಬ ಸಮೇತ ಹಲವು ವರ್ಷಗಳಿಂದ ವಾಸವಿದ್ದ ರವಿ ರಾಜನ್ ಎಂಬವರ ಮನೆಯಲ್ಲಿ ಕಳ್ಳತನ ನಡೆದಿದೆ. ಇತ್ತೀಚೆಗೆ ಬಡಾವಣೆಗೆ ಬಂದಿದ್ದ ನೇಪಾಳಿ ಮೂಲದ ಸೆಕ್ಯೂರಿಟಿ ಗಾರ್ಡ್ ಒಬ್ಬ ಪತ್ನಿಗೆ ಮನೆಯಲ್ಲಿ ಕೆಲಸವಿದ್ದರೆ ಕೊಡಿ. ನಿತ್ಯ ಕಾರುಗಳನ್ನು ತೊಳೆದು ಮನೆ ಕ್ಲೀನ್ ಮಾಡಿಕೊಡುತ್ತಾರೆ ಎಂದು ಕೇಳಿಕೊಂಡಿದ್ದ. ಆತನ ಮಾತು ಕೇಳಿ ರವಿ ರಾಜನ್ ಕೂಡ ಕೆಲಸ ನೀಡಿದ್ದರು. ಈ ನಡುವೆ ನಾವು ಊರಿಗೆ ಹೋಗಿಬರುತ್ತೇವೆ. ಮನೆಕಡೆ ಹುಷಾರು ಎಂದು ಹೇಳಿ ಕುಟುಂಬ ತೆರಳಿತ್ತು. ಇದೇ ಸರಿಯಾದ ಸಮಯ ಎಂದು ಅಲರ್ಟ್ ಆದ ಆರೋಪಿಗಳು, ಮಧ್ಯರಾತ್ರಿ ಮನೆಗೆ ನುಗ್ಗಿ ಕಳ್ಳತನ ನಡೆಸಿದ್ದಾರೆ.

### ಕುಟುಂಬಸ್ಥರಿಗೆ ಕಾದಿತ್ತು ಆಘಾತ

ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಬಂದ ಕುಟುಂಬಸ್ಥರಿಗೆ ಬಡಾವಣೆಯ ನೆರೆ ಹೊರೆಯವರು ಸೆಕ್ಯೂರಿಟಿ ಗಾರ್ಡ್ ಒಬ್ಬ ನಾಪತ್ತೆಯಾಗಿದ್ದು ಮನೆಯಲ್ಲಿ ಒಮ್ಮೆ ಚೆಕ್ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಹೀಗಾಗೆ ಮನೆ ಒಳಗಡೆ ಹೋಗಿ ನೋಡಿದಾಗ ಬಾಗಿಲು ಒಡೆದು ಕಳ್ಳರು ಕಳ್ಳತನ ಮಾಡಿರುವ ದೃಶ್ಯ ಕಂಡು ಬಂದಿದೆ. ಜತೆಗೆ ಸಿಸಿ ಟಿವಿ ಪರಿಶೀಲನೆ ನಡೆಸಿದಾಗ ಇಬ್ಬರು ವ್ಯಕ್ತಿಗಳು ಮನೆ ಒಳಗಡೆ ರಾಡ್ ಹಿಡಿದು ನುಗ್ಗಿ ಒಡಾಡಿ ಕಳ್ಳತನ ಮಾಡಿರುವ ದೃಶ್ಯಗಳು ಅದರಲ್ಲಿ ಸೆರೆಯಾಗಿವೆ. ಇದರ ಆಧಾರದಲ್ಲಿ ಕುಟುಂಬಸ್ಥರು ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಆರೋಪಿಗಳಿಗಾಗಿ ಹುಡುಕಾಟ ಮುಂದುವರಿದಿದೆ.

### ನಗರಕ್ಕೆ ಕಾಲಿಟ್ಟ ಚಡ್ಡಿ ಗ್ಯಾಂಗ್

ಬೆಂಗಳೂರು: ಬೆಂಗಳೂರು ಹೊರವಲಯದ ಆನೇಕಲ್ ತಾಲೂಕಿನಲ್ಲಿ ಚಡ್ಡಿ ಗ್ಯಾಂಗ್ ಹಾವಳಿ ಮತ್ತೆ ಆತಂಕ ಮೂಡಿಸಿದೆ. ಕುಂಬಾರನಹಳ್ಳಿಯ ಸೆಲೆಬ್ರಿಟಿ ಇಕೋ ಫ್ರಂಟ್ ಬಡಾವಣೆಗೆ ಶನಿವಾರ ರಾತ್ರಿ ನುಗ್ಗಿದ ಕಳ್ಳರ ತಂಡ, ಎರಡು ಮನೆಗಳಲ್ಲಿ ಕಳ್ಳತನಕ್ಕೆ ಯತ್ನಿಸಿರುವ ಘಟನೆ ನಡೆದಿದೆ. ಕುಂಬಾರನಹಳ್ಳಿಯ ಚಂದ್ರಶೇಖರ್ ಹಾಗೂ ರಾಮರೆಡ್ಡಿ ಎಂಬುವವರ ಮನೆಗಳನ್ನು ಗುರಿಯಾಗಿಸಿಕೊಂಡು ಕಳ್ಳರು ಕೃತ್ಯಕ್ಕೆ ಮುಂದಾಗಿದ್ದಾರೆ. ಮುಖ ಮುಚ್ಚಿಕೊಂಡು ಬಂದಿದ್ದ ಖದೀಮರು ಮನೆಯ ಗೇಟ್ ಕತ್ತರಿಸಲು ಯತ್ನಿಸಿದ್ದು, ಬಳಿಕ ಕಾಂಪೌಂಡ್ ಮೇಲೆ ಓಡಾಡಿ ಕಳ್ಳತನಕ್ಕೆ ಸ್ಕೆಚ್ ಹಾಕಿದ್ದಾರೆ. ಕಳ್ಳರ ತಂಡದ ಕೆಲವರು ರಸ್ತೆಯಲ್ಲಿ ಓಡಾಡುತ್ತಿದ್ದರೆ, ಇನ್ನಿಬ್ಬರು ಮನೆಗಳ ಬಳಿ ಚಲನವಲನ ನಡೆಸಿದ್ದಾರೆ. ಈ ವೇಳೆ ಶಬ್ದ ಕೇಳಿಸಿಕೊಂಡ ಬಡಾವಣೆಯ ಮಹಿಳೆಯೊಬ್ಬರು ಕಿಟಕಿಯಿಂದ ಹೊರಗೆ ನೋಡಿದ್ದಾರೆ. ಕಳ್ಳರ ಚಲನವಲನ ಗಮನಿಸಿದ ಅವರು ಕಿರುಚಿಕೊಂಡಿದ್ದಾರೆ. ಇದರಿಂದ ಎಚ್ಚೆತ್ತ ಕಳ್ಳರು ಅಲ್ಲಿಂದ ಪರಾರಿಯಾಗಿದ್ದಾರೆ. ಘಟನೆಯ ಸಂಪೂರ್ಣ ದೃಶ್ಯಗಳು ಬಡಾವಣೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಒಳಉಡುಪಿನಲ್ಲಿ ಸಂಚರಿಸುತ್ತಿದ್ದ ಕಳ್ಳರ ಚಲನವಲನ ಸಿಸಿಟಿವಿಯಲ್ಲಿ ದಾಖಲಾಗಿದ್ದು, ಇದೀಗ ಪೊಲೀಸರಿಗೆ ತನಿಖೆಗೆ ಪ್ರಮುಖ ಸುಳಿವಾಗಿದೆ. ಘಟನೆ ಜಿಗಣಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಪರಾರಿಯಾಗಿರುವ ಕಳ್ಳರ ಪತ್ತೆಗೆ ಜಿಗಣಿ ಪೊಲೀಸರು ಶೋಧ ಕಾರ್ಯ ಮುಂದುವರಿಸಿದ್ದಾರೆ.

# ವಿಚ್ಛೇದನ ತಡೆಗೆ ವಿವಾಹ ಸಮಾಲೋಚನೆ ಅತ್ಯಗತ್ಯ

## ಕೂಡಿ ಬಾಳೋಣ ಅಭಿಯಾನ: ಡಾ.ನಾಗಲಕ್ಷ್ಮೀ

**ಬೆಂಗಳೂರು:** ಮದುವೆಯು ಕೇವಲ ಆಡಂಬರಕ್ಕೆ ಸೀಮಿತವಾಗದೆ, ಶಾಶ್ವತವಾಗಿ ಉತ್ತಮ ಕೌಟುಂಬಿಕ ಜೀವನ ಕಟ್ಟಿಕೊಳ್ಳಲು ಬುನಾದಿಯಾಗಬೇಕು ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ತಿಳಿಸಿದರು.ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಹೆಚ್ಚುತ್ತಿರುವ ಕೌಟುಂಬಿಕ ಕಲಹ ಹಾಗೂ ವಿಚ್ಛೇದನ ಪ್ರಕರಣ ಕಡಿಮೆ ಮಾಡುವ ಉದ್ದೇಶದಿಂದ ರಾಷ್ಟ್ರೀಯ, ರಾಜ್ಯ ಮಹಿಳಾ ಆಯೋಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸರಕಾರದ ಸಹಯೋಗದಲ್ಲಿ ತೆರೆ ಮೇರೆ ಸಾಥ್- ಕೂಡಿ ಬಾಳೋಣ ಕಾರ್ಯಕ್ರಮ ಪ್ರತಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಗೆ ಸೋಮವಾರ ಚಾಲನೆ ನೀಡಲಾಗಿದ್ದು, ರಾಜ್ಯದ 175 ಸಾಂತ್ವನ ಕೇಂದ್ರಗಳಲ್ಲಿ ವಿವಾಹಪೂರ್ವ ಸಂವಹನ ಕೇಂದ್ರ ಆರಂಭಿಸಲಾಗುತ್ತಿದೆ ಎಂದರು. ವಿವಾಹಕ್ಕೂ ಮುನ್ನ ಯುವಜನರು ಹಾಗೂ ಭಾವಿ ದಂಪತಿಗಳಿಗೆ ಪರಸ್ಪರ ಅರಿವು, ಪರಿಣಾಮಕಾರಿ ಸಂವಹನ, ಭಿನ್ನಾಭಿಪ್ರಾಯಗಳ ಪರಿಹಾರ, ಭಾವನಾತ್ಮಕ ಸಿದ್ಧತೆ, ಆರ್ಥಿಕ ನಿರ್ವಹಣೆ, ಲಿಂಗ ಸಮಾನತೆ, ಪರಸ್ಪರ ಗೌರವ ಸೇರಿದಂತೆ ಕೌಟುಂಬಿಕ ಜೀವನಕ್ಕೆ ಅಗತ್ಯವಾದ ವಿವಿಧ ವಿಷಯಗಳ ಕುರಿತು ಸಮಾಲೋಚನೆ ನೀಡಲಾಗುವುದು. ವಿವಾಹಕ್ಕೂ ಮುನ್ನವೇ ಸೂಕ್ತ ಅರಿವು ಮೂಡಿಸಿ, ದಂಪತಿಗಳ ನಡುವೆ ಉತ್ತಮ ಸಂವಹನ ಬೆಳೆಸುವ ಮೂಲಕ ಕೌಟುಂಬಿಕ ಸಮಸ್ಯೆ ಹಾಗೂ ವಿಚ್ಛೇದನ ಪ್ರಕರಣ ಕಡಿಮೆ ಮಾಡುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ ಎಂದರು.



ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಮಾತನಾಡಿದರು.

> ರಾಜ್ಯದ 175 ಸಾಂತ್ವನ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ಸಮಾಲೋಚಕರಿಗೆ ವಿಶೇಷ ತರಬೇತಿ ನೀಡಲಾಗುತ್ತಿದ್ದು, ಪ್ರತಿ ಕೇಂದ್ರದಲ್ಲಿ ಸುಮಾರು ಐದು ಮಂದಿ ಸಮಾಲೋಚಕರಿಗೆ ವಿವಾಹಪೂರ್ವ ಸಂವಹನ ಹಾಗೂ ಸಮಾಲೋಚನಾ ವಿಧಾನಗಳ ಕುರಿತು ತರಬೇತಿ ನೀಡಲಾಗುತ್ತಿದೆ. ತರಬೇತಿ ಪೂರ್ಣಗೊಂಡ ಬಳಿಕ ಆಯಾ ಸಾಂತ್ವನ ಕೇಂದ್ರಗಳ ಮೂಲಕ ವಿವಾಹಪೂರ್ವ ಸಮಾಲೋಚನೆ ಸೇವೆ ಪರಿಣಾಮಕಾರಿಯಾಗಿ ಒದಗಿಸಲಾಗುವುದು.
> -ಡಾ.ನಾಗಲಕ್ಷ್ಮೀ ಚೌಧರಿ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿ [illegible]ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

| ಅ ನಂ. | ಸಾಲಗಾರರ ಹೆಸರು (ಎ) | ಅಡವು ಇಟ್ಟ ಆಸ್ತಿಯ ವಿವರ (ಬಿ) | ಎನ್‌ಪಿಎಯ ತಾರೀಖು (ಸಿ) | ಬಾಕಿ ಉಳಿದ ಕೊಡಬೇಕಾದಹಣ (ಡಿ) |
|---|---|---|---|---|
| 1. | ಸಾಲ ಖಾತೆ ನಂ. HHLBEC00404220 / HHEBEC00404233<br>1. ಜಿ ನರೇಂದ್ರ ರೆಡ್ಡಿ ಸಿ/ಒ ಐಬಿಎಂ ಪ್ರೈವೇಟ್ ಲಿಮಿಟೆಡ್<br>2. ಡಿ ಶುಭಾಂಜಲಿ | 3ನೇ ಮಹಡಿಯಲ್ಲಿರುವ "ರೇಡಿಯಂಟ್ ರೇಷನ್" ಕಟ್ಟಡದ 416ನೇ ಅಪಾರ್ಟ್‌ಮೆಂಟ್, ಒಟ್ಟು 1065 ಚದರ ಅಡಿ ಸೂಪರ್ ಬಿಲ್ಟ್-ಅಪ್ ವಿಸ್ತೀರ್ಣ ಹೊಂದಿದ್ದು, ಖಾತಾ ಸಂಖ್ಯೆ 54/3ಎ ರ ಪರಿವರ್ತಿತ ಜಮೀನಿನ ಮೇಲೆ ನಿರ್ಮಾಣಗೊಂಡಿದೆ. ಈ ಜಮೀನು ಸರ್ವೇ ಸಂಖ್ಯೆ 54/3ಎ ಯಿಂದ ರೂಪುಗೊಂಡಿದ್ದು, ಪೂರ್ವದಿಂದ ಪಶ್ಚಿಮಕ್ಕೆ 142 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 307 ಅಡಿ ಅಳತೆಯನ್ನು ಹೊಂದಿದೆ 0.097%. ಈ ಆಸ್ತಿಯೊಂದಿಗೆ, ಮೇಲ್ಕಂಡ ಜಮೀನಿನಲ್ಲಿ 425 ಚದರ ಅಡಿ ಅವಿಭಜಿತ ಹಕ್ಕು, ಮಾಲೀಕತ್ವ ಮತ್ತು ಪಾಲು, ಕಟ್ಟಡದ ಸಾಮಾನ್ಯ ಪ್ರದೇಶಗಳು ಹಾಗೂ ಸೌಲಭ್ಯಗಳ ಬಳಕೆಯ ಹಕ್ಕು, ಜೊತೆಗೆ ಒಂದು ಕಾರು ನಿಲುಗಡೆ ಸ್ಥಳ (ಕಾರ್ ಪಾರ್ಕಿಂಗ್) ಸಹ ಒಳಗೊಂಡಿರುತ್ತದೆ. ಈ ಆಸ್ತಿ ಯಲೆನಹಳ್ಳಿ ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬಿ.ಜಿ. ರಸ್ತೆ, ಬೆಂಗಳೂರು ಜಿಲ್ಲೆ ಕರ್ನಾಟಕದಲ್ಲಿದೆ. | 09.07.2026 | ರೂ. 33,56,562.47/- (ರೂಪಾಯಿ ಮೂವತ್ತ ಮೂರು ಲಕ್ಷ ಐವತ್ತ ಆರು ಸಾವಿರದ ಐದು ನೂರ ಅರವತ್ತ ಎರಡು ಮತ್ತು ಪೈಸೆ ನಲವತ್ತ ಏಳು ಮಾತ್ರ) (ಸಾಲ ಸೌಲಭ್ಯ ಸಂಖ್ಯೆ 1 ರ ವಿರುದ್ಧ) ಮತ್ತು ರೂ. 22,16,001.98/- (ರೂಪಾಯಿ ಇಪ್ಪತ್ತ ಎರಡು ಲಕ್ಷದ ಹದಿನಾರು ಸಾವಿರದ ಒಂದು ಮತ್ತು ಪೈಸೆ ತೊಂಬತ್ತ ಎಂಟು ಮಾತ್ರ) (ಸಾಲ ಸೌಲಭ್ಯ ಸಂಖ್ಯೆ 2 ರ ವಿರುದ್ಧ) ಒಟ್ಟು ಬಾಕಿ ಮೊತ್ತ ರೂ. 55,72,564.45/- (ರೂಪಾಯಿ ಐವತ್ತ ಐದು ಲಕ್ಷದ ಎಪ್ಪತ್ತ ಎರಡು ಸಾವಿರದ ಐದು ನೂರ ಅರವತ್ತ ನಾಲ್ಕು ಮತ್ತು ಪೈಸೆ ನಲವತ್ತ ಐದು ಮಾತ್ರ) (ಸಾಲ ಸೌಲಭ್ಯಗಳು ಸಂಖ್ಯೆ 1 ಮತ್ತು 2 ರ ವಿರುದ್ಧ) 20.07.2026 ರಂತೆ |

ಈ ಮೇಲಹಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪನಿ ಕಾನೂನಿನಲ್ಲಿಉಪಲಬ್ಧವಿರುವಿತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: "ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು ) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು"

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಅಧಿಕೃತ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು

# 178 ಸಾಂತ್ವನ ಕೇಂದ್ರಗಳಲ್ಲಿ ಕೂಡಿ ಬಾಳೋಣ

## ವಿವಾಹ ವಿಚ್ಛೇದನ ನಿಯಂತ್ರಿಸಿ ಕೌಟುಂಬಿಕ ಬಾಂಧವ್ಯ ಬಲಪಡಿಸಲು ಸರಕಾರ-ರಾಷ್ಟ್ರೀಯ ಮಹಿಳಾ ಆಯೋಗ ಒಡಂಬಡಿಕೆ: ಡಾ.ಶಾಲಿನಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಮಾಹಿತಿಯುಕ್ತ, ಗೌರವಯುತ ಮತ್ತು ದೃಢವಾದ ವೈವಾಹಿಕ ಸಂಬಂಧ ಉತ್ತೇಜಿಸುವ ನಿಟ್ಟಿನಲ್ಲಿ ಸರಕಾರ ಹಾಗೂ ರಾಷ್ಟ್ರೀಯ ಮಹಿಳಾ ಆಯೋಗದ ಜಂಟಿ ಸಹಯೋಗದಲ್ಲಿ 178 ಸಾಂತ್ವನ ಕೇಂದ್ರಗಳಲ್ಲಿ ತೇರೆ- ಮೇರೇ ಸಪ್ನೆ- ಕೂಡಿ ಬಾಳೋಣ ವಿವಾಹ ಪೂರ್ವ ಸಂವಹನ ಯೋಜನೆ ಜಾರಿಗೆ ತರಲಾಗಿದೆ ಎಂದು ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ತಿಳಿಸಿದರು.

ನಗರದ ಜವಹರ್‌ಬಾಲ ಭವನದಲ್ಲಿ ನಡೆದ ಸಾಂತ್ವನ ಕೇಂದ್ರಗಳ ಸಲಹೆಗಾರರ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ವೇಗವಾಗಿ ಬದಲಾಗುತ್ತಿರುವ ಸಾಮಾಜಿಕ ಪರಿಸರದಲ್ಲಿ ಮದುವೆಗೆ ಮುನ್ನ ಯುವಜನರಲ್ಲಿ ಭಾವನಾತ್ಮಕ ಸಿದ್ಧತೆ, ಪರಸ್ಪರ ಗೌರವ ಹಾಗೂ ಧನಾತ್ಮಕ ಸಂವಹನ ಬೆಳೆಸುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ರಾಜ್ಯದ 178 ಸಾಂತ್ವನ ಕೇಂದ್ರಗಳ ಮೂಲಕ ವಿವಾಹ ಪೂರ್ವ ಸಂವಹನ ಕೇಂದ್ರ ಸ್ಥಾಪಿಸುತ್ತಿದ್ದು, ಉಚಿತ ಸಮಾಲೋಚನೆ ಒದಗಿಸುವ ಮೂಲಕ ಕುಟುಂಬ ಸಂಸ್ಥೆ ಬಲಪಡಿಸಲು ಈ ಯೋಜನೆ ದೊಡ್ಡ ಮಟ್ಟದಲ್ಲಿ ನೆರವಾಗಲಿದೆ.

ಯುವಜನರು ಮದುವೆಗೂ ಮುನ್ನ ಅಗತ್ಯ ಜೀವನ ಕೌಶಲ್ಯ ರೂಢಿಸಿಕೊಳ್ಳುವುದು, ಆರ್ಥಿಕ ಯೋಜನೆ ಮಾಡುವುದು ಹಾಗೂ ದೈನಂದಿನ ಕೌಟುಂಬಿಕ ಸಮಸ್ಯೆ ಪ್ರಬುದ್ಧತೆಯಿಂದ ಪರಿಹರಿಸಿಕೊಳ್ಳಲು ಈ ಕೇಂದ್ರಗಳು ಮಾರ್ಗದರ್ಶನ ನೀಡಲಿವೆ ಎಂದರು.

**ಯೋಜನೆಯ ಪ್ರಮುಖ ಉದ್ದೇಶ:** ಮದುವೆಗೆ ಮುನ್ನ ನಿರೀಕ್ಷಿತ ದಂಪತಿಗಳ ನಡುವೆ ಪರಸ್ಪರ ತಿಳಿವಳಿಕೆ, ಗೌರವ ಮತ್ತು ಭಾವನಾತ್ಮಕ ಸಿದ್ಧತೆ ಬೆಳೆಸುವುದು, ಜವಾಬ್ದಾರಿಗಳ ಹಂಚಿಕೆ, ಆರ್ಥಿಕ ನಿರ್ವಹಣೆ ಮತ್ತು ಉದ್ಭವಿಸಬಹುದಾದ ಸಮಸ್ಯೆಗಳ ಪರಿಹಾರಕ್ಕೆ ರಚನಾತ್ಮಕ ಸಮಾಲೋಚನೆ, ಪ್ರಬುದ್ಧ ಸಂವಾದ ಹಾಗೂ ವೃತ್ತಿಪರ ಮಾರ್ಗದರ್ಶನದ ಮೂಲಕ ಅನಗತ್ಯ ಕೌಟುಂಬಿಕ ಕಲಹ ತಡೆದು, ಲಿಂಗ-ಸೂಕ್ಷ್ಮ ಕುಟುಂಬ ವ್ಯವಸ್ಥೆ ನಿರ್ಮಾಣ ಎಂದರು.



ಕಾರ್ಯಕ್ರಮವನ್ನು ಸರಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಉದ್ಘಾಟಿಸಿರು. ಈ ವೇಳೆ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ವಿಜಯ ರಹತ್ಕರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಶಮ್ಲಾ ಇಕ್ಬಾಲ್, ನಿರ್ದೇಶಕಿ ಸ್ನೇಹ, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿ ಆರ್. ರೂಪ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

> ಬಲವಾದ ಕುಟುಂಬಗಳ ನಿರ್ಮಾಣಕ್ಕೆ ಉತ್ತಮ ಸಂವಹನ ಮತ್ತು ನಂಬಿಕೆ ಅಡಿಪಾಯವಾಗಿದೆ. ಈ 178 ಕೇಂದ್ರಗಳ ಸೇರ್ಪಡೆಯೊಂದಿಗೆ, ಕರ್ನಾಟಕವು ದೇಶದಲ್ಲೇ ಅತಿ ದೊಡ್ಡ ಅನುಷ್ಠಾನ ರಾಜ್ಯಗಳಲ್ಲಿ ಒಂದಾಗಿದ್ದು, ರಾಷ್ಟ್ರೀಯ ಮಹಿಳಾ ಆಯೋಗವು ದೇಶದ 16 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 285ಕ್ಕೂ ಹೆಚ್ಚು ಕೇಂದ್ರಗಳಿಗೆ ಮಾರ್ಗದರ್ಶನ ನೀಡಿದಂತಾಗಿದೆ.
> – ವಿಜಯ ರಹತ್ಕರ್, ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ

### ಸಂಸ್ಥೆಗಳ ಜವಾಬ್ದಾರಿ ಹಂಚಿಕೆ

ಈ ಯೋಜನೆ ರಾಜ್ಯಾದ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಮೂರೂ ಸಂಸ್ಥೆ ತಮ್ಮ ಹೊಣೆಗಾರಿಕೆ ಹಂಚಿಕೊಂಡಿವೆ. ರಾಷ್ಟ್ರೀಯ ಮಹಿಳಾ ಆಯೋಗವು ಯೋಜನೆಗೆ ಅಗತ್ಯವಾದ ಪ್ರಮಾಣೀಕೃತ ತರಬೇತಿ ಮಾಡ್ಯೂಲ್ ಪೂರೈಕೆ, ಮಾಸ್ಟರ್ ತರಬೇತುದಾರರಿಗೆ ತರಬೇತಿ ನೀಡಿ ಪ್ರಮಾಣಪತ್ರ ವಿತರಿಸುವುದು ಹಾಗೂ ರಾಷ್ಟ್ರೀಯ ಮಟ್ಟದ ಮೇಲ್ವಿಚಾರಣೆ ವಹಿಸುವುದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಜ್ಯದ 178 ಸಾಂತ್ವನ ಕೇಂದ್ರ ನಿರ್ವಹಿಸುವುದು ಹಾಗೂ ಸಾರ್ವಜನಿಕರಿಗೆ /ಫಲಾನುಭವಿಗಳಿಗೆ ಸಂಪೂರ್ಣ ಉಚಿತ ವಿವಾಹ ಪೂರ್ವ ಸಮಾಲೋಚನಾ ಸೇವೆ ನೀಡುವುದು. ಕರ್ನಾಟಕ ರಾಜ್ಯ ಮಹಿಳಾ ಆಯೋಗ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವ್ಯಾಪಕ ಸಾರ್ವಜನಿಕ ಜಾಗೃತಿ ಮೂಡಿಸುವುದು ಹಾಗೂ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು ಎಂದು ಸರಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ತಿಳಿಸಿದರು.